ಒಮ್ಮೆಲೇ ಅವನು ವಾಸ್ತವ ಲೋಕಕ್ಕೆ ಮರಳಲು ಪ್ರಯತ್ನಿಸಿದರೂ ಸಾಧ್ಯವಾಗದೆ ಇನ್ನೊಂದು ಸುಳಿಯಲ್ಲಿ ಸಿಲುಕಿದ. ಅವನ ಕಣ್ಣೆದುರಿಗೆ ಆ ಪುಟ್ಟ ಬಾಲಕಿ ಇದ್ದಳು. ಅಭಿರಕ್ಷೆಯ ಕೇಸ್‌ಗಳಲ್ಲಿ ಈ ರೀತಿಯ ಅನೇಕ ಬಾಲಕ ಬಾಲಕಿಯರನ್ನು ಅವನು ಈಗಾಗಲೇ ನೋಡಿದ್ದ.

ವಿಷಯಗಳು ಹೇಗೆ ಅವನ ಅಂತರಂಗದ ಧ್ವನಿಯಾಗುವುದೋ ಅವನಿಗೆ ಅರ್ಥವಾಗುತ್ತಿರಲಿಲ್ಲ. ಆದರೆ ಅಭಿರಕ್ಷೆಯ ಪ್ರಕರಣಗಳಲ್ಲಿ ಅವನ ತೀರ್ಪುಗಳು ಮೈಲಿಗಲ್ಲುಗಳೆಂದು ಗುರುತಿಸಲ್ಪಡುತ್ತಿದ್ದು ಉಚ್ಚ ನ್ಯಾಯಾಲಯದಲ್ಲಿ ಕೂಡಾ ಮಾನ್ಯತೆಯನ್ನು ಪಡೆಯುತ್ತಿದ್ದುದು ಅವನಿಗೆ ಅಪಾರ ನೆಮ್ಮದಿ ತರುವ ಸಂಗತಿಯಾಗಿತ್ತು.

ಅಂದು ಇಬ್ಬರೂ ಮಹಿಳೆಯರು ಮತ್ತು ಒಬ್ಬ ಪುಟ್ಟ ಬಾಲಕಿಯನ್ನು ಕಂಡು ಇದೆಲ್ಲವೂ ಅವನ ಮನದಲ್ಲಿ ಪುನರಾವರ್ತನೆಯಾಯಿತು. ಕೆಳದನಿಯಲ್ಲಿ ಅವನು ಬೆಂಚ್ ಕ್ಲರ್ಕ್‌ಗೆ ಏನೋ ಹೇಳಿದ. ಕೂಡಲೇ ಆ ಬೆಂಚ್ ಕ್ಲರ್ಕ್ ಬಾಗಿಲ ಬಳಿ ನಿಂತಿದ್ದ ಅಟೆಂಡರ್‌ನನ್ನು ಕರೆದು ಗುಸುಗುಸು ನಡೆಸಿದ. ಅಟೆಂಡರ್ ಆ ಮಹಿಳೆಯರ ಬಳಿ ಹೋಗಿ ಅವರನ್ನು ಬೆಂಚ್ ಕ್ಲರ್ಕ್ ಬಳಿ ಕರೆತಂದ. ಆತ ಆ ಮಹಿಳೆಯರನ್ನು ಉದ್ದೇಶಿಸಿ, 'ನೀವು ಈಗ ಹೋಗಿ. ಎರಡೂವರೆ ಗಂಟೆಗೆ ಸರಿಯಾಗಿ ಮಗುವಿನ ಜೊತೆಯಲ್ಲಿ ಬನ್ನಿ' ಎಂದು ನುಡಿದ.

ಅವರು ಸಮೀಪ ಬಂದಾಗ ಶಾಹಿದ್ ಹುಸೇನ್ ಆ ಮಗುವನ್ನು ಇನ್ನಷ್ಟು ಆಳವಾಗಿ ದಿಟ್ಟಿಸಿದ. ಅದರ ಗುಂಗುರು ಕೂದಲನ್ನು ಕೆದರಿ ಅದರ ಕೆನ್ನೆಯನ್ನು ಸವರ ಬೇಕೆಂಬ ಉತ್ಕಟ ಇಚ್ಛೆ ಅವನಲ್ಲಿ ಉದ್ಭವಿಸಿತು. ಅವನು ತನ್ನ ಕನ್ನಡಕವನ್ನು ಒರೆಸುವ ನೆಪದಲ್ಲಿ ಕಣ್ಣ ನೋಟವನ್ನು ಕೆಳಗೆ ಹಾಯಿಸಿದ.

ಅಟೆಂಡರ್‌ನ ದೃಷ್ಟಿ ಕೋರ್ಟ್ ಹಾಲಿನ ಗೋಡೆಯ ಮೇಲಿದ್ದ ಹಳೆಯ ಗಡಿಯಾರದ ಮೇಲೆ ನೆಟ್ಟಿತ್ತು. ಎಂಟು ದಶಕಗಳನ್ನು ಕಂಡಿದ್ದ ದುಂಡನೆಯ ದೊಡ್ಡ ಗಡಿಯಾರವು ತನ್ನ ಲಯದಲ್ಲಿ ಯಾವುದೇ ಬದಲಾವಣೆ ಇಲ್ಲದೆ ಯಥಾಸ್ಥಿತಿಯನ್ನು ಕಾಪಾಡಿಕೊಂಡಿದ್ದು, ಆ ಅವಧಿಯಲ್ಲಿ ನಡೆದಿದ್ದ ಸಾಮಾಜಿಕ ಸಂಚಲನೆಗಳು ಮತ್ತು ಮನುಷ್ಯ ಸಂಬಂಧಗಳ ಅಮಾನವೀಯ ತಿರುವುಗಳು ಅದರ ಚಲನೆಯ ಗತಿಯನ್ನು ನಿರ್ದೇಶಿಸುವಲ್ಲಿ ಸೋತು ಹೋಗಿದ್ದವು. ದುರ್ಬಲ ಗಳಿಗೆಗಳ ನೆತ್ತರ ಚರಿತ್ರೆಯಾಗಲಿ ವ್ಯವಸ್ಥಿತ ಸಂಚಿನ ಕೊಲೆಗಳಾಗಲಿ ಅಥವಾ ಸಾಕ್ಷಿ ಕಟ್ಟೆಯಲ್ಲಿ ನಿಂತ ಸಾಕ್ಷಿಗಳ ಕಣ್ಣೀರ ಕೋಡಿಯಾಗಲಿ ಅಥವಾ ಭಯದ ವಿಹ್ವಲತೆಯಾಗಲಿ ಆ ಗಡಿಯಾರವನ್ನು ಕಾಡಿಸಲಿಲ್ಲ. ಅತ್ಯಂತ ಸ್ವಾಭಾವಿಕವಾಗಿ, ಸಹಜವಾಗಿ ನಿರ್ದಯವಾಗಿ ನಿರ್ಭಾವುಕವಾಗಿ ನಿಶ್ಚಿಂತೆಯಿಂದ ಅದು ತನ್ನದೇ ಗತಿಯನ್ನು ಖುದ್ದು ನಿರ್ವಹಿಸುತ್ತಿತ್ತು. ಗಡಿಯಾರದ ಅಂತರಂಗವನ್ನು ಭೇದಿಸದೆ ಅಟೆಂಡರ್ ರಾಜಪ್ಪ ಒಂದು ಕಣ್ಣನ್ನು ಗಡಿಯಾರದತ್ತ ಇನ್ನೊಂದು ಕಣ್ಣನ್ನು ಸಾಹೇಬರತ್ತ ನೆಟ್ಟಿದ್ದ. ಸಾಹೇಬರು ಏಳುವ ಹೊತ್ತಿಗೆ ಅವನು ಧಾವಿಸಿ ಬಂದು ಅವರು ಕುಳಿತಿದ್ದ ಕುರ್ಚಿಯನ್ನು ಹಿಂದಕ್ಕೆ ಸರಿಸಿ ಅವರು ಏಳುವುದಕ್ಕೆ ಅನುವು ಮಾಡಿಕೊಟ್ಟು ಟೇಬಲ್ ಮೇಲಿದ್ದ ಅವರ ಕನ್ನಡಕ, ಪುಸ್ತಕ ಮೊದಲಾದ ಅಗತ್ಯ ಪರಿಕರಗಳನ್ನು ಹಿಡಿದು ಅವರ ಹಿಂದೆ ಓಡಬೇಕಿತ್ತು.

ಹಾಗೆ ಸಾಹೇಬರು ಚೇಂಬರ್‌ನೊಳಗೆ ಹೋದ ನಂತರ ಅವನ ಇನ್ನಿತರೆ ಕೆಲಸಗಳು ಆರಂಭ ಆಗುತ್ತಿದ್ದವು. ಉದಾಹರಣೆಗೆ ಸಾಹೇಬರು ಫೋನ್ ಹಿಡಿದಿದ್ದಾಗ ಅವನು ಯಾರನ್ನೂ ಒಳ ಬಿಡುವಂತಿರಲಿಲ್ಲ. ಅಂದು ಕೂಡ ಅವನು ಇಣುಕಿ ನೋಡಿದಾಗ ಸಾಹೇಬರು ಕೈಯಲ್ಲಿ ಫೋನ್